

# ಗೋ ವಾಣಿ

ಸಂಪುಟ 01 | ಸಂಚಿಕೆ 35 | ಮಾರ್ಚ್ 31, 2018 | e ವಾರಪತ್ರಿಕೆ

## ಗೋ ಸೂಕ್ತಿ

"ನೋಡಲು ಬರಿಯ ದನ? ಆದರೆ ಅದರ ಮಮತೆಗೆ ಸೃಷ್ಟಿಯೆಲ್ಲ ಸ್ಪಂ–ದನ !!"

ಶ್ರೀಮಜ್ಜಗದ್ಗುರುಶಂಕರಾಚಾರ್ಯ ಶ್ರೀಶ್ರೀರಾಘವೇಶ್ವರಭಾರತೀ ಮಹಾಸ್ವಾಮಿಗಳು

## ಸಂಪಾದಕೀಯ



### ಗೋಪ್ರೇಮಿಗಳೇ ಜಾಗೃತರಾಗಿ..

ಕರ್ನಾಟಕ ರಾಜ್ಯ ವಿಧಾನಸಭೆ ಚುನಾವಣೆ ದಿನಾಂಕ ನಿಗದಿಯಾಗಿದೆ. ಮುಂದಿನ ಐದು ವರ್ಷಕ್ಕೆ ರಾಜ್ಯದ ಅಧಿಕಾರ ಚುಕ್ಕಾಣಿಯನ್ನು ಯಾರು ಹಿಡಿಯಬೇಕು ಎನ್ನುವುದನ್ನು ಪ್ರಜ್ಞಾಪೂರ್ವಕವಾಗಿ ನಿರ್ಧರಿಸಬೇಕಾಗಿದೆ. ಬಣ್ಣದ ಭರವಸೆಗಳನ್ನು ನೀಡಿ ಮತ ಪಡೆದು ನಮ್ಮನ್ನು ವಂಚಿಸುವ ಪಕ್ಷಗಳು ಹಾಗೂ ಮುಖಂಡರ ವಿರುದ್ಧ ನಾವು ಜಾಗೃತರಾಗಬೇಕು. ಈಗ ತಪ್ಪಿದರೆ ನಾವು ಮತ್ತೆ ಐದು ವರ್ಷ ಕಾಲ ಪಶ್ಚಾತ್ತಾಪಪಡಬೇಕಾಗುತ್ತದೆ.

ರೋಡ್ ಶೋ, ಸಭೆ, ಸಾಮಾಜಿಕ ಜಾಲತಾಣ, ಮಾಧ್ಯಮ, ಮನೆ ಮನೆ ಪ್ರಚಾರ ಹೀಗೆ ತರಹೇವಾರಿ ವಿಧಾನಗಳ ಮೂಲಕ ಮತಭಿಕ್ಷೆ ಬೇಡುತ್ತಾರೆ. ಅವರ ಬಣ್ಣದ ಭರವಸೆಗಳಿಗೆ ಮರುಳಾಗದೇ, ನಮ್ಮ ವಿವೇಚನೆ ಬಳಸಬೇಕು. ಮತ ಕೇಳಲು ಬಂದಾಗ ಧೈರ್ಯವಾಗಿ ಗೋಪ್ರೇಮಿಗಳು ಕೇಳಬೇಕಾದ್ದು ಎರಡೇ ಪ್ರಶ್ನೆ. ನೀವು ಗೋವಿನ ಪರವೇ ಅಥವಾ ವಿರೋಧವೇ? ನೀವು ಅಧಿಕಾರಕ್ಕೆ ಬಂದರೆ ಕಸಾಯಿಖಾನೆ ಸ್ಥಾಪನೆಗೆ ನೆರವು ನೀಡುತ್ತೀರಾ ಅಥವಾ ಗೋಹತ್ಯೆ ತಡೆಯುವ ಸಂಕಲ್ಪ ತೊಡುತ್ತೀರಾ?

ನಿಮ್ಮ ಮತವನ್ನು ಎಂಜಲು ಕಾಸು, ಸೀರೆ, ಪಾತ್ರೆ– ಪಗಡೆ, ಉಂಗುರ, ಸಾರಾಯಿ, ಬಾಡೂಟಕ್ಕೆ ಮಾರಿಕೊಳ್ಳಬೇಡಿ. ಬದಲಾಗಿ ಅಧಿಕಾರಕ್ಕೆ ಬಂದರೆ, ಗೋಸೇವೆ ಮಾಡುತ್ತೇವೆ ಎಂಬ ಪ್ರತಿಜ್ಞೆ ಪಡೆಯಿರಿ. ನಿಮ್ಮ ಗೋಶಾಲೆಗೆ ನೆರವು ಕೋರಿ. ಬಡವರಿಗೆ ಸರ್ಕಾರದ ವತಿಯಿಂದ ಗೋವು ವಿತರಿಸುವಂತೆ ಕೇಳಿ. ನಮ್ಮ ಅಮೂಲ್ಯ ಗೋತಳಿಗಳ ಸಂರಕ್ಷಣೆ– ಸಂವರ್ಧನೆಗೆ ಯೋಜನೆ ರೂಪಿಸುವಂತೆ ಆಗ್ರಹಿಸಿ. ಸಾಧ್ಯವಾದರೆ ಗೋಸಂರಕ್ಷಕರಿಗಷ್ಟೇ ನಮ್ಮ ಮತ ಎಂಬ ಬ್ಯಾನರ್‌ಗಳನ್ನು ನಿಮ್ಮ ನಿಮ್ಮ ಹಳ್ಳಿಗಳಲ್ಲಿ ಅಳವಡಿಸಿ. ಗೋಹಂತಕರಿಗೆ ಇಲ್ಲಿ ಪ್ರವೇಶ ನಿರ್ಬಂಧಿಸಿ. ಈ ಚುನಾವಣೆಯಲ್ಲಾದರೂ ಗೋವು ನಿರ್ಣಾಯಕ ಎನ್ನುವುದು ನಮ್ಮ ರಾಜಕಾರಣಿಗಳಿಗೆ ಮನವರಿಕೆ ಮಾಡಿಕೊಡಿ. ಗೋ ಆಧರಿತ ಆರ್ಥಿಕತೆಯಷ್ಟೇ ಸುಸ್ಥಿರ ಅಭಿವೃದ್ಧಿ, ಗೋಸಂಕುಲದಿಂದಷ್ಟೇ ಭವ್ಯ ಭಾರತ ನಿರ್ಮಾಣ ಸಾಧ್ಯ ಎಂಬ ಜ್ಞಾನೋದಯ ನಮ್ಮ ನೇತಾರರಿಗೆ ಆಗಬೇಕು.

## COW ಸ್ಟೋರಿ

ವಿದೇಶದಲ್ಲಿ ಭಾರತೀಯ ತಳಿಗಳನ್ನು ಅಭಿವೃದ್ಧಿಪಡಿಸಿ ಉಳಿಸಿಕೊಂಡಿದ್ದಾರೆ ಎಂದರೆ ಖುಷಿಯ ವಿಚಾರ. ಹಾಗೆಯೇ ಆ ಕೆಲಸವನ್ನು ನಮ್ಮಲ್ಲಿ ಮಾಡಲಾಗಿಲ್ಲವಲ್ಲ ಎಂಬ ಬೇಸರವಿದೆ. ಅಲ್ಲಿ ಅವುಗಳ ಸದುಪಯೋಗವಾದರೆ ಸಮಾಧಾನ. ದುರುಪಯೋಗ ಆದರೆ ಬೇಸರವಾಗುತ್ತದೆ. ದೇಸಿ ತಳಿಗಳ ನಡುವೆ ನಡೆಯೋದಕ್ಕೆ ಸಂಗಮ ಎನ್ನಬಹುದೇ ಹೊರತು, ದೇಸಿ ಮತ್ತು ವಿದೇಶಿ ನಡುವಿನದಕ್ಕೆ ಸಂಗಮ ಎನ್ನಲಾಗದು. ಅದು ಸಂಕರವೇ ಎನ್ನುತ್ತಾರೆ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು.

2 ➤



# ಸರಿಯಾದ್ದು ಸೇರಿದರೆ ಸಂಗಮ
# ಸಲ್ಲದ್ದು ಸೇರಿದರೆ ಸಂಕರ